ವಿ-72-(58)

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಹರೀಶ್ ಕುಮಾರ್ ರವರು ನಿಯಮ-72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

### ವಿಷಯ

ಉಡುಪಿ ಜಿಲ್ಲೆ ಮೂರ್ತೆದಾರರ ಸಹಕಾರಿ ಮಹಾಮಂಡಲದ ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಹಣ ದುರುಪಯೋಗ ಮಾಡಿರುವ ಬಗ್ಗೆ ಹಾಗೂ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಮೈಸೂರು ಪ್ರಾಂತ, ಇವರ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇದ್ದ ಪ್ರಕರಣದ ಕಡತ ನಾಪತ್ತೆ ಮಾಡಿ ತನಿಖೆಗೆ ವಿಳಂಬ ಮಾಡುವ ಮೂಲಕ ಅವ್ಯವಹಾರದಲ್ಲಿ ಭಾಗಿಯಾಗಿದ್ದ ಅಧಿಕಾರಿಗಳಿಗೆ ರಕ್ಷಣೆ ನೀಡಿರುವುದರಿಂದ ಸಹಕಾರಿ ಮಹಾಮಂಡಲಕ್ಕೆ ಆರ್ಥಿಕ ನಷ್ಟ ಉಂಟಾಗಿರುವ ಬಗ್ಗೆ

### ಉತ್ತರ

ಉಡುಪಿ ಜಿಲ್ಲೆ ಮೂರ್ತೆದಾರರ ಸಹಕಾರಿ ಮಹಾಮಂಡಳ ನಿ., ಉಡುಪಿ ಇದರ ಕಾರ್ಯವ್ಯಾಪ್ತಿಯು ಸಹಕಾರ ಸಂಘಗಳ ಜಂಟಿ ನಿಬಂಧಕರು ಮೈಸೂರು ಪ್ರಾಂತ, ಮೈಸೂರು ಇವರ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಸದರಿ ಮಹಾಮಂಡಳದ ಹಿಂದಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಣದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಸಹಕಾರ ಸಂಘಗಳ ಜಂಟಿ ನಿಬಂಧಕರ ಕಛೇರಿಯಲ್ಲಿ ಅಧಿಭಾರ ಅರ್ಜಿ ದಾಖಲಾಗಿರುವ ಬಗ್ಗೆ ಅಧಿಬಾರ ಅರ್ಜಿ ವಹಿಯನ್ನು ಪರಿಶೀಲಿಸಲಾಗಿ ಅಂತಹ ಯಾವುದೇ ರೀತಿಯ ಅಧಿಬಾರ ಅರ್ಜಿ ದಾಖಲಾಗಿರುವ ಬಗ್ಗೆ ನಮೂದಾಗಿರುವುದಿಲ್ಲ. ಅಲ್ಲದೇ ಈ ಸಂಬಂಧ ಅಧಿಬಾರ ಅರ್ಜಿಯ ವಿಚಾರಣೆಗೆ ಕಡತ ತೆರೆದು ಕಡತ ನಿರ್ವಹಿಸಿರುವುದು ಕಂಡುಬಂದಿರುವುದಿಲ್ಲ. ಆದ್ದರಿಂದ ವಿಷಯದಲ್ಲಿ ಪ್ರಸ್ತಾಪಿಸಿರುವ ಈ ಅಧಿಬಾರ ಅರ್ಜಿ ದಾಖಲಿಸಿದ ನಂತರ ನಿಗಧಿತ ಅಧಿಬಾರ ಶುಲ್ಕವನ್ನು ಪಾವತಿಸಬೇಕಿರುತ್ತದೆ. ಅಂತಹ ಶುಲ್ಕ ಪಾವತಿಸಿರುವ ಬಗ್ಗೆಯೂ ಕಛೇರಿಯಲ್ಲಿ ಮಾಹಿತಿ ಲಭ್ಯವಿರುವುದಿಲ್ಲ.

ಸಹಕಾರ ಸಂಘಗಳ ಜಂಟಿ ನಿಬಂಧಕರು ಮೈಸೂರು ಪ್ರಾಂತ, ಮೈಸೂರು ಇವರಿಗೆ ಹೊಸದಾಗಿ ಅಧಿಬಾರ ಅರ್ಜಿ ದಾಖಲಿಸಿಕೊಳ್ಳಲು ಕ್ರಮಕ್ಕೆ ಸೂಚಿಸಲಾಗಿದೆ. ಸ್ವಯಂ ಅಧಿಭಾರ ಅರ್ಜಿ ದಾಖಲಿಸಿಕೊಳ್ಳುವ ಬಗ್ಗೆ ಕ್ರಮವಿಡಲಾಗುವುದು.

**ಸಂಖ್ಯೆ: ಸಿಒ 77 ಪಿಎಂಸಿ 2020**

ಎಸ್.ಟಿ. ಸೋಮಶೇಖರ್

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು